ದಿನಾಂಕಃ **15.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

05. 2011 ನೇ ಇಸವಿಯಲ್ಲಿ ನಾನು ಏನು ಕೆಲಸ ಮಾಡುತ್ತಿದ್ದೆ? ಎಂದರೆ ವಿದ್ಯಾಭ್ಯಾಸ ಮಾಡುತ್ತಿದ್ದೆ. ಆಗ ನಾನು 3 ನೇ ವರ್ಷದ ಬಿ.ಸಿ.ಎ ಪದವಿ ವ್ಯಾಸಂಗ ಮಾಡುತ್ತಿದ್ದೆ. ಆ ಸಮಯದಲ್ಲಿ ನನಗೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ. 5 ಮತ್ತು 8 ನ್ನು ನಾನು ಯಾವ ಆದಾಯದಿಂದ ಖರೀದಿ ಮಾಡಿದ್ದೆ? ಎಂದರೆ ನಮಗೆ ಮುಂಡರಗಿಯಲ್ಲಿ 25 ಎಕರೆ ಪಿತ್ರಾರ್ಜಿತ ಆಸ್ತಿಗಳು ಇದ್ದು ಅವುಗಳಿಂದ ಬಂದ ಆದಾಯದಿಂದ ಈ ಆಸ್ತಿಗಳನ್ನು ಖರೀದಿಸಿದ್ದೇನೆ. ನಮ್ಮ ಮುಂಡರಗಿಯ ಒಟ್ಟು ಕುಟುಂಬದಲ್ಲಿ ಪಾಲುವಿಭಾಗ ಆಗಿದೆಯೇ? ಎಂದರೆ ಈಗ ಅಂದರೆ 2017 ರಲ್ಲಿ ಮುಂಡರಗಿ ಕುಟುಂಬದಲ್ಲಿ ಪಾಲುವಿಭಾಗ ಆಗಿರುತ್ತದೆ. ಮುಂಡರಗಿ ಕುಟುಂಬದಲ್ಲಿ ಪಾಲುವಿಭಾಗ ಆದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ವಕೀಲರು ಎಂದರೆ ಸರಿ. ಅವರು ಈ ದಿನಕ್ಕೆ ಸುಮಾರು 30 ವರ್ಷಗಳಷ್ಟು ಕಾಲ ವಕೀಲಿಕೆ ವೃತ್ತಿ ಅಭ್ಯಾಸ ಮಾಡುತ್ತಿದ್ದಾರೆ. ದಾವಾ ಐಟಂ ನಂ. 5 ಮತ್ತು 8 ರ ಖರೀದಿಯ ಮಾತು-ಕತೆ ಕ್ರಯ ಪತ್ರ ಆಗುವ ಒಂದು ತಿಂಗಳ ಮುಂಚೆ ನಡೆದಿತ್ತು ಕ್ರಯದ ಮಾತು -ಕತೆಯಲ್ಲಿ ನಾನು, ನನ್ನ ತಾಯಿ, ನನ್ನ ಅಜ್ಜ , ನಿರ್ಮಲಾ @ ಸುಮಂಗಳಾ, ಹನುಮಂತಪ್ಪ ಮತ್ತು ಹನುಮಂತಪ್ಪ ಊರಿನವರು ಇಬ್ಬರು ಭಾಗವಹಿಸಿದ್ದೆವು. ಸದರಿ ಕ್ರಯದ ಮಾತು-ಕತೆಯಲ್ಲಿ ನನ್ನ ತಂದೆ ಭಾಗವಹಿಸಿರಲಿಲ್ಲ, ಅವರು ಕೋರ್ಟ್ ಕಲಾಪಕ್ಕೆ ಹೋಗಿದ್ದರು. ಕ್ರಯದ ಮಾತು-ಕತೆಗಿಂತ ಮುಂಚೆ ಅಥವಾ ಕ್ರಯ ಮಾಡುವ ಸಮಯದಲ್ಲಿ ನಾನು ನಿರ್ಮಲಾ @ ಸುಮಂಗಳಾ ಪಾಟೀಲ್ ರವರ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೆ? ಎಂದರೆ ಅವರ ಪಾಲುವಿಭಾಗ ಪತ್ರ ಮತ್ತು ಅವರ ಹೆಸರಿಗೆ ಆಗಿದ್ದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೆ. ನಂತರ ನಾನು ಕ್ರಯದ ಮಾತು-ಕತೆ ಬಗ್ಗೆ ನನ್ನ ತಂದೆಗೆ ತಿಳಿಸಿದೆ. ನನ್ನ ತಂದೆಯು ಈ ಕ್ರಯದ ಸಂಬಂಧ ದಾಖಲೆಗಳನ್ನು ಪರಿಶೀಲನೆ ಮಾಡಿದ್ದರು .

06. ನಾನು ನನ್ನ ಪ್ರತಿವಾದ ಪತ್ರದ ಪ್ಯಾರಾ ನಂ 10 ರಲ್ಲಿ ನಿರ್ಮಲಾ @ ಸುಮಂಗಳಾ ಇವರ ಕುಟುಂಬದಲ್ಲಿ Equitable Family Settlement & Arrangement ಆಗಿತ್ತೆಂದು ಹೇಳುತ್ತಿದ್ದು, ಸದರಿ Equitable Family Settlement & Arrangement ಯು ಯಾರ ಯಾರ ನಡುವೆ ಆಗಿತ್ತು ಮತ್ತು ಯಾವ ದಿನಾಂಕ, ತಿಂಗಳು ಹಾಗೂ ವರ್ಷದಂದು ಆಗಿತ್ತು? ಎಂದರೆ ಇಸವಿ 2000 ದಲ್ಲಿ ಆಗಿತ್ತು. ಸಂಗನಗೌಡ ಮತ್ತು ಅವರ ಸಹೋದರರ ನಡುವೆ ಆಗಿತ್ತು. ಸಂಗನಗೌಡರ ಸಹೋದರರು ಯಾರು ಎಂದು ನನಗೆ ಅಷ್ಟೊಂದು ಮಾಹಿತಿ ಇಲ್ಲ. ಸಾಕ್ಷಿಗೆ ಅವರ ಕ್ರಯ ಪತ್ರಗಳಾದ ನಿಡಿ 8 ಮತ್ತು ನಿಡಿ 16 ಕ್ರಯ ಪತ್ರಗಳಲ್ಲಿ ಇರುವ ಉಲ್ಲೇಖವನ್ನು ಓದಲು ತಿಳಿಸಿ

ಇವುಗಳಲ್ಲಿ ನಿರ್ಮಲಾ @ ಸುಮಂಗಳಾ ಪಾಟೀಲ್ ಇವರಿಗೆ ಖಾತೆಯು ಪಾಲುಪಟ್ಟಿ ಅಥವಾ ವ್ಯವಸ್ಥಾ ಪತ್ರದ ಮೂಲಕ ನಮೂದಾಗಿದೆ ಎಂದು ಉಲ್ಲೇಖವಾಗಿದೆಯೇ**?** ಎಂದರೆ ಸಾಕ್ಷಿಯು ನಿಡಿ 8 ಮತ್ತು ನಿಡಿ 16 ನ್ನು ಓದಿದ ನಂತರ ಆ ರೀತಿ ಉಲ್ಲೇಖವಾಗಿಲ್ಲವೆಂದು ಹೇಳಿದ್ದಾರೆ. ಕ್ರಯ ಪತ್ರದಲ್ಲಿ ಪಾಲುಪಟ್ಟಿ ಅಥವಾ ವ್ಯವಸ್ಥಾ ಪತ್ರದ ಮೂಲಕ ಖಾತೆಯಾಗಿದೆ ಎಂದು ಬರೆಯಿಸಲು ತೊಂದರೆ ಇತ್ತೇ? ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ನಾನು ಈಗ ನನ್ನ ಅನುಕೂಲಕ್ಕೆ ತಕ್ಕಂತೆ ಪಾಲುಪಟ್ಟಿ ಮತ್ತು ವ್ಯವಸ್ಥಾ ಪತ್ರದ ಮೂಲಕ ನಿರ್ಮಲಾ @ ಸುಮಂಗಳಾ ಪಾಟೀಲ್ ಅವರಿಗೆ ಖಾತೆಯಾಗಿತ್ತೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿರ್ಮಲಾ @ ಸುಮಂಗಳಾ ಪಾಟೀಲ್ ರವರಿಂದ ಖರೀದಿ ಮಾಡುವ ಮುಂಚೆ ಅದರ ಬಗ್ಗೆ ಯಾರಿಗಾದರೂ ತಕರಾರು ಇದ್ದಲ್ಲಿ ತಿಳಿಸಬೇಕು ಎಂದು ಕೋರಿ ಪತ್ರಿಕಾ ಪ್ರಕಟಣೆಯನ್ನು ಪಡೆದಿದ್ದುಂಟೇ? ಎಂದರೆ ಪಡೆದಿರಲಿಲ್ಲ.

07. ನಮ್ಮ ಮೂಲ ಸ್ಥಳ ಮುಂಡರಗಿ ಇರುತ್ತದೆ. ಐಟಂ ನಂ. 5 ಮತ್ತು 8 ಹಿರೇಮಲ್ಲನಕೆರೆ ಗ್ರಾಮದಲ್ಲಿವೆ ಎಂದರೆ ಸರಿ. ಮುಂಡರಗಿಯಿಂದ ಹಿರೇಮಲ್ಲನಕೆರೆ ಸುಮಾರು 15-20 ಕಿ.ಮೀ. ಅಂತರದಲ್ಲಿರುತ್ತದೆ. ಈ ಜಮೀನುಗಳು ಮುಂಚೆಯಿಂದಲೂ ಸಾಗುವಳಿ ಹಾಗೂ ಫಲವತ್ತಾದ ಜಮೀನುಗಳಾಗಿದ್ದವು ಎಂದರೆ ನಾವು ಖರೀದಿ ಮಾಡಿದ ನಂತರ ಫಲವತ್ತು ಜಮೀನುಗಳಾಗಿ ಮಾಡಿದ್ದೇವೆ. ನನ್ನ ಕ್ರಯ ಪತ್ರಗಳಾದ ನಿಡಿ 8 ಮತ್ತು ನಿಡಿ 16 ರಲ್ಲಿ ಈ ಜಮೀನುಗಳು ನದುರಸ್ಥಿ ಅಥವಾ ಸಾಗುವಳಿ ಮಾಡದೇ ಇರುವ ಜಮೀನುಗಳೆಂದು ಉಲ್ಲೇಖವಾಗಿದೆಯೇ? ಎಂದರೆ ಆಗಿಲ್ಲ. ನಾನು ಖರೀದಿ ಮಾಡಿದ ನಂತರ ನದುರಸ್ಥಿ ಜಮೀನುಗಳನ್ನು ಸಾಗುವಳಿ ಜಮೀನುಗಳಾಗಿ ಮಾಡಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವಂತವಾಗಿ ಯಾವತ್ತೂ ಜಮೀನುಗಳ ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಈ ಜಮೀನುಗಳನ್ನು ಖರೀದಿ ಮಾಡಲು ಯಾವುದೇ ಆದಾಯ ಮತ್ತು ಉದ್ಯೋಗ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಸೇರಿಕೊಂಡು ನಾನು ಹಾಜರು ಮಾಡಿದ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಐಟಂ ನಂ. 5 ಮತ್ತು 8 ರ ಆಸ್ತಿಗಳು ಈಗಲೂ ವಾದಿ ಮತ್ತು ವಾದಿಯ ಕುಟುಂಬ ಸದಸ್ಯರ ಸ್ವಾಧೀನದಲ್ಲೇ ಇರುತ್ತವೆ ಎಂದರೆ ಸರಿಯಲ್ಲ. ಇವತ್ತಿಗೂ ಈ ಆಸ್ತಿಗಳು ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿಗಳ ಸ್ವಾಧೀನದಲ್ಲೇ ಇರುತ್ತವೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಈ ಜಮೀನುಗಳನ್ನು ಸ್ವಾಧೀನ ಹೊಂದಿಲ್ಲ ಮತ್ತು ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ಗುರುಬಸವನಗೌಡ ಈ ಪಾಲುವಿಭಾಗ ದಾವೆ ಬಿಟ್ಟರೆ ಬೇರೆ ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ ಎಂದರೆ ಸರಿ. ನನಗೆ ಮತ್ತು ವಾದಿಗೆ ಯಾವುದೇ ವಿಧವಾದ ವೈಯಕ್ತಿಕ ದ್ವೇಷವಿಲ್ಲ ಎಂದರೆ ಸರಿ. ನಾನು ಸದ್ಭಾವನೆಯಿಂದ ಸೂಕ್ತ ಕ್ರಯದ ಮೊಬಲಗನ್ನು ಪಾವತಿ ಮಾಡಿ ಐಟಂ ನಂ. 5 ಮತ್ತು 8 ನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. 2011 ನೇ ಇಸವಿನಲ್ಲಿ ಐಟಂ ನಂ. 5 ಮತ್ತು 8 ಕ್ಕೆ ಎಕರೆಗೆ

ರೂ. 10 ರಿಂದ 12 ಲಕ್ಷ ಬೆಲೆ ಇತ್ತು ಎಂದರೆ ಇಲ್ಲ, ಎಕರೆಗೆ ರೂ. 1 ಲಕ್ಷ ಇತ್ತು. ಈ ಆಸ್ತಿಗಳನ್ನು ಕಬಳಿಸಲು ನಾನು ನಿಡಿ 8 ಮತ್ತು ನಿಡಿ 16 ಕ್ರಯ ಪತ್ರಗಳನ್ನು ಸಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ ನಿರ್ಮಲಾ @ ಸುಮಂಗಳಾ ಪಾಟೀಲ್ ರವರು ಬರೆದುಕೊಟ್ಟ ಕ್ರಯ ಪತ್ರಗಳಲ್ಲಿ ಪಿತ್ರಾರ್ಜಿತ ಆಸ್ತಿ ಎಂದು ನಮೂದಾಗಿದ್ದು, ಆಕೆಯ ಕುಟುಂಬ ಸದಸ್ಯರೂ ಕೂಡ ಕ್ರಯ ಪತ್ರಗಳಿಗೆ ಸಹಿ ಮಾಡುವಂತೆ ಕೇಳಿದ್ದೀರಾ ಎಂದರೆ ಕೇಳಿಲ್ಲ. ಐಟಂ ನಂ. 5 ಮತ್ತು 8 ರ ಮೇಲೆ ನನಗೆ ಯಾವುದೇ ವಿಧವಾದ ಹಕ್ಕು, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀಸವಾಲುಃ 7 ನೇ ಪ್ರತಿವಾದಿಯ ಪರವಾಗಿ ನೇಮಕ ಮಾಡಿದ ಮೈನರ್ ಗಾರ್ಡಿಯನ್ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ವಾದಿಯ ಪರ ವಕೀಲರು ಈಗಾಗಲೇ ವಿಶದವಾಗಿ ಪಾಟೀಸವಾಲು ಮಾಡಿದ್ದು, ದಾವೆಯು 2019 ರಿಂದ ಬಾಕಿ ಉಳಿದ ಹಳೆಯ ಪ್ರಕರಣವಾಗಿರುವ ಕಾರಣ ವಿನಂತಿಯನ್ನು ನಿರಾಕರಿಸಲಾಗಿದೆ .***

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.